ಕರ್ನಾಟಕ ವಿಧಾನಸಭೆ

12ನೇ ವಿಧಾನಸಭೆ

2ನೇ ಅಧಿವೇಶನ

ಮುಂದುವರೆದ ಉಪವೇಶನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3920

ಉತ್ತರಿಸಬೇಕಾದ ದಿನಾಂಕ : 11.07.2005

ವಿಧಾನಸಭೆ ಸದಸ್ಯರ ಹೆಸರು : ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)

ವಿಷಯ : ಕಾಪುವಿನಲ್ಲಿ ಗಣಕೀಕೃತ ಭೂದಾಖಲೆ ನೀಡುವ ಕೇಂದ್ರ ತೆರೆಯುವುದು.

	ಪ್ರಶ್ನೆ	ಉತ್ತರ
1	ಖಾಸಗಿಯವರಿಗೆ ಗಣಕೀಕೃತ ಭೂದಾಖಲೆ ನೀಡುವ ಕೇಂದ್ರಗಳನ್ನು ತೆರೆಯಲು ಅನುಮತಿ ನೀಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ.	ಸಾರ್ವಜನಿಕ ಖಾಸಗಿ ಸಹಭಾಗಿತ್ವ ದೊಂದಿಗೆ ಗ್ರಾಮ ಮಟ್ಟದಲ್ಲಿ ಕಿಯಾಸ್ಕ್ ಗಳನ್ನು ಸ್ಥಾಪಿಸಲು ಸರ್ಕಾರವು
2	ಈ ಯೋಜನೆಯಂತೆ ಕಾಪು ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕೇಂದ್ರ ತೆರೆಯಲು ಸರ್ಕಾರ ಇಚ್ಚಿಸಿದೆ.	ವಿವರಗಳನ್ನು ಸಿದ್ಧಪಡಿಸಲಾಗುತ್ತಿದೆ.
3	ಈ ಯೋಜನೆ ಅನುಷ್ಠಾನಕ್ಕೆ ಕಾನೂನು ತೊಡಕಿದ್ದರೆ ಅದನ್ನು ನಿವಾರಿಸಿ ಸರ್ಕಾರದ ವತಿಯಿಂದ ಕಾಪು ಕ್ಷೇತ್ರದಲ್ಲಿ ಭೂದಾಖಲೆ ಗಣಕೀಕೃತ ಕೇಂದ್ರ ತೆರೆಯಲು ಕ್ರಮ ಕೈಗೊಳ್ಳಲಾಗುವುದೇ ಹಾಗಿದ್ದಲ್ಲಿ	ಈ ಯೋಜನೆಯ ಅನುಷ್ಠಾನಕ್ಕೆ ಕಾನೂನು ತೊಡಕಿರುವುದಿಲ್ಲ.

4	ಕಾಪು ಕ್ಷೇತ್ರದಲ್ಲಿ ಖಾಸಗಿಯವರಿಂದ ಗಣಕೀಕೃತ ಕೇಂದ್ರವನ್ನು ತರೆಯಲು ಅನುಮತಿ ನೀಡಲಾಗುವುದೇ: ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು	ಹೌದು, ಖಾಸಗಿಯವರಿಗೆ ಗಣಕೀಕೃತ ಕಿಯಾಸ್ಕ್‌ಗಳನ್ನು ತೆರೆಯಲು ಅನುಮತಿ ನೀಡುವ ಕುರಿತಾದ ವಿವರಗಳನ್ನು ಅಂತಿಮಗೊಳಿಸಲಾಗುತ್ತಿದೆ.

ಶ್ರೀ ಲಾಲಾಜಿ ಆರ್ ಮಂಡನೆ :– ಮಾನ್ಯ ಅಧ್ಯಕ್ಷರೇ, ಉತ್ತರಗಳನ್ನು ಕೊಟ್ಟಿದ್ದಾರೆ. ನಮ್ಮ ಕಾಪು ವಿಧಾನಸಭಾ ಕ್ಷೇತ್ರ ಉಡುಪಿ ತಾಲ್ಲೂಕಿಗೆ ಬರುತ್ತದೆ. ಕಾಪುವಿನಲ್ಲಿ ಗಣಕೀಕೃತ ಆರ್ ಟಿ ಸಿ ಕೇಂದ್ರವನ್ನು ತೆರೆಯಲು ನಾವು ಬೇಡಿಕೆ ಇಟ್ಟಿದ್ದೇವೆ.ಈಗಾಗಲೇ ಉಡುಪಿಯಿಂದ ಬ್ರಹ್ಮಾವರವನ್ನು ಸೆಪರೇಟ್ ಮಾಡಿದ್ದರೂ ಕೂಡ, ಇನ್ನೂ 2,40,000 ಖಾತೆದಾರರಿದ್ದಾರೆ. ಹಾಗಾಗಿ, ಕಾಪುವಿನ ಜನರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಖಾಸಗಿಯವರಿಗೆ ಆರ್ ಟಿ ಸಿ ಕೇಂದ್ರವನ್ನು ಕೊಟ್ಟರೆ ಜನರಿಗೆ ತುಂಬಾ ಅನುಕೂಲವಾಗುತ್ತದೆ ಎನ್ನುವುದು ನಮ್ಮ ಬೇಡಿಕೆಯಾಗಿದೆ. ಅಲ್ಲಲ್ಲಿ ಇಂಥ ನಾಲ್ಕೈದು ವಿತರಣಾ ಕೇಂದ್ರಗಳನ್ನು ಮಾಡಿದರೆ ವಿತರಣೆಗೂ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸಚಿವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: (ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಸೌಲಭ್ಯಗಳ ಅಭಿವೃದ್ಧಿ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೇ, ನಾನು ಕಂದಾಯ ಇಲಾಖೆಯ ಕಾರ್ಯದರ್ಶಿಗಳ ಮೂಲಕ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ತಕ್ಷಣವೇ ಇದನ್ನು ಪ್ರಾರಂಭ ಮಾಡಿಸುತ್ತೇನೆ. ಖಾಸಗಿ ಸಹಭಾಗಿತ್ವದಲ್ಲಿ ಮಾಡುತ್ತಿರತಕ್ಕಂಥ ಕಾರ್ಯಕ್ರಮವಿದು. ಅದಷ್ಟು ಇದನ್ನು ಅನುಷ್ಠಾನಗೊಳಿಸಲು ನಾನು ಸೂಚನೆಯನ್ನು ಇವತ್ತೇ ಕೊಡಿಸುತ್ತೇನೆ.